

ಅದರಾಚೆಯ ಸುಂದರ ಭೂದೃಶ್ಯವನ್ನು ನೋಡುವುದು ಸಾಧ್ಯ. ನೋಡಿದೆ. ಅಲ್ಲಿ ಏನಿದೆ, ಏನಿಲ್ಲ! ನಮ್ಮ ಕಲ್ಪನೆಯೇ ಎಲ್ಲವನ್ನೂ ತಂದು ತೋರಿಸುತ್ತದೆ: ನಾನು ಹುಲ್ಲುಗಾವಲೊಂದನ್ನು ಕಲ್ಪಿಸುತ್ತೇನೆ. ಲೋ ಏಂಡ್ ಬಿಹೋಲ್ಡ್! ಹುಲ್ಲುಗಾವಲು ಪ್ರತ್ಯಕ್ಷ. ದನಗಳನ್ನು ಕಲ್ಪಿಸುತ್ತೇನೆ: ದನಗಳು ಇವೆ. ಜುಳು ಜುಳು ಹರಿಯುವ ತೊರೆ? ಅದೂ ಉಂಟು. ಅಲ್ಲಿ ಸ್ನಾನಕ್ಕೆ ಇಳಿಯುವ ಒಬ್ಬ ಸುಂದರಿ? ಛೀ ಏನಿದು ನನ್ನ ಮರ್ಕಟ ಮನಸ್ಸು ಎಂದು ನಾಚಿಕೆಯಾಯಿತು. ಆಸೆಗೂ ಒಂದು ಮಿತಿಯಿರಬೇಕು. ಇಷ್ಟು ದೂರ ತಲಪಿದಮೇಲೆ ಸ್ವಲ್ಪ ಗಂಭೀರವಾಗಿರುವುದನ್ನು ಕಲಿಯೋ ಎಂದೆ ನನಗೆ ನಾನೇ. ಸರಿ ಎಂದು ಉತ್ತರವನ್ನೂ ಕೊಟ್ಟೆ. ಗಂಭೀರನಾದೆ. ಮತ್ತೆ ನನ್ನ ಕಣ್ಣು ನನ್ನ ಪರಿಚಿತರ ಕಡೆ ತಿರುಗಿತು; ಕದ್ದು ನೋಡಿದೆ. ಅವರೂ ಆಗಾಗ ನನ್ನನ್ನು ನೋಡಿ ತಮ್ಮ ತಮ್ಮೊಳಗೇ ಏನೋ ಮಾತಾಡಿಕೊಳ್ಳುತ್ತಿದ್ದರು. ಅವರು ಸ್ವಲ್ಪ ಕಸಿವಿಸಿಗೆ ಒಳಗಾದಂತೆ ಅನಿಸಿತು. ಅದೇನೋ ಅತೃಪ್ತಿ ಅವರಲ್ಲಿ ಇನ್ನೂ ಇದ್ದಿತ್ತು. ಎಲ್ಲವನ್ನೂ ಸಾಧಿಸಿ ನಿರಾಳವಾಗಿರಬೇಕಾದ ತಾಣ ಇದು—ಯಾಕೆ ಅತೃಪ್ತರಾಗಿದ್ದಾರೆ? ನಾನೇನಾದರೂ ಮಾಡುವುದು ಸಾಧ್ಯವೇ? ಹೋಗಿ ಕೇಳಲೇ? ತಡೆ ಎಂದಿತು ಮನಸ್ಸು. ಇವರು ನಿನ್ನನ್ನು ಲಾಗಾಯ್ತಿನಿಂದಲೂ ತುಚ್ಛೀಕರಿಸಿದವರು. ಈಗ ಹೋಗಿ ಕೇಳಿದರೆ, ಅವಮಾನಕ್ಕೆ ಇನ್ನೊಂದು ಅವಕಾಶ ಕೊಟ್ಟಂತೆ. ಕೆಲವೊಮ್ಮೆ ಸುಮ್ಮನಿರುವುದೇ ಒಳ್ಳೆಯದು. ಯು ಡೋಂಟ್ ಮೀನ್ ಎನಿ ಹಾರ್ಮ್. ದಾಟ್ಸ್ ಆಲ್. 'ದಾಟ್ಸ್ ಆಲ್' ಎಂಬುದನ್ನು ರಿಪೀಟ್ ಮಾಡಿದೆ, ನನ್ನದೇ ಮನಸ್ಸಮಾಧಾನಕ್ಕೆ. ನಮಗೆ



ಚಿತ್ರಗಳು : ಎಸ್.ವಿ. ಹೂಗಾರ